ಮಾಂಸದಂಗಡಿಯವನು ಬಂಗಲೆಯ ಹುಡುಗಿಯನ್ನು ಓಡಿಸಿಕೊಂಡು ಹೋದ; ಆದರೆ ಏನೂ ಮಾಡದೆ ಬಿಟ್ಟ– ಅಂದರೆ, ಯಾರು ನಂಬುತ್ತಾರೆ?'

'ನಾನೂ ನಂಬೋದಿಲ್ಲ!' ಮತ್ತೆ ಖಿಲ್ಲನೆ ನಕ್ಕಳು ವೆನ್ನೆಲಾ.

'ಯಾಕೆ?'

'ನೀನೇನು ಮಾಡಿದ್ದೀಯೆಂಬುದು ನಿನಗೇನು ಗೊತ್ತು? ನನ್ನ ಮನೆಯ ಪ್ರಹರಿಗೋಡೆ ಧಿಕ್ಕರಿಸಲಾರದಷ್ಟು ಎತ್ತರವಿತ್ತು. ಹ್ಯಾಗಯ್ಯಾ ಹತ್ತಿಬಂದೆ? ನನ್ನ ಗಂಡನ ಕಣ್ಣು ಕುಳಿತಲ್ಲೇ ಬೇಲಿ ಸುತ್ತುತ್ತಿದ್ದರೆ ಹೇಗೆ ಧಿಕ್ಕರಿಸಿ ಬಂದೆ? ಕರುಳ ಕಂದ ಅಮಾಯಕ ನಿದ್ರೆಗಿಳಿದ ಹೊತ್ತಿನಲ್ಲಿ ಅದೆಷ್ಟು ನಿರ್ಮಮವಾಗಿ ಅದರ ಕೆನ್ನೆಯೂ ಸವರದೆ ಎದ್ದು ಬಂದೆ! ನೀನು ಏನೂ ಮಾಡಿರದಿದ್ದರೆ ಇದೆಲ್ಲ ಸಾಧ್ಯವಾಗುತ್ತಿತ್ತೇ? ನೀನು ನನ್ನ ಶಕ್ತಿ, ನನ್ನ ಧೈರ್ಯ, ನನ್ನ ಆವೇಶ. ಪಾತಿವ್ರತ್ಯದ ಚೀಲ ಉಸಿರುಗಟ್ಟಿಸುತ್ತಿದ್ದ ಕ್ಷಣಗಳಲ್ಲಿ ಅದರ ಒಡಲು ಬಗೆದು ಒಳನುಗ್ಗಿದ ಜೀವಸೂಜಿ ನೀನು. ನನ್ನೊಳಗೆ ಆಸೆಯಾಗಿ ಕದಲಿದ ಮೂಕ ಭ್ರೂಣ. ನಿನಗೆ ಋಣಿ ಕಣೋ ನಾನು, ಋಣಿ!'

ಇವುಗಳನ್ನು ಮೀರಿದ ಮಾತಿನ್ನು ತನಗೆ ಬಾರದೆಂಬಂತೆ ಮೂಕಳಾಗಿ ಅವಳು ಅವನ ಕಣ್ಣು ಚುಂಬಿಸಿದಳು. ಆಗ ನಿಧಾನವಾಗಿ ಸಂಜೆ ಸುರಿಯುತ್ತಿತ್ತು.

★★★

ಹಾಗೆ ಮಾಂಸದಂಗಡಿಯ ಅವನೂ ಮಹಲ ಮಲ್ಲಿಗೆಯಂಥ ಅವಳೂ ಆ ಮಿನಾರುಗಳ ಊರಿನಲ್ಲಿ ವಿನಾಕಾರಣ ಗೋರಿಯಿಂದ ಗೋರಿಗೆ, ಶಿಥಿಲದಿಂದ ಶಿಥಿಲಕ್ಕೆ ಅಲೆಯುತ್ತ ಒಂದಿಡೀ ದಿನ ಕಳೆದರು. ಸಿಕ್ಕಲ್ಲಿ ಕುಳಿತು ಮಾತಾದರು. ನಿಲುಕಿದ್ದು ತಿಂದು ತೃಪ್ತರಾದರು. ತಮ್ಮ ಮನೆ, ಗಂಡ, ಹೆಂಡತಿ, ಮಕ್ಕಳು ಮತ್ತು ಬೇಲಿ ಪ್ರಹರಿಗಳನ್ನು ಬಿಟ್ಟು ಬಂದವರು. ಮೂವತ್ತೈದರ ವಯಸ್ಸೆಂಬ ಬದುಕಿನ ಮೊದಲ ಇಂಟರ್‌ವೆಲ್ಲನ್ನು, ಅದರ ಏಕತಾನತೆಯ ಸಮೇತ ಮುರಿದು ಹಾಕಿ ಹೆಸರುಗೊತ್ತಿಲ್ಲದ ಊರಿಗೆ ಓಡಿಬಂದವರು. ಸಂಜೆ ಮುಗಿದು ರಾತ್ರಿ ಹುಯ್ಯತೊಡಗಿದ ಕ್ಷಣಗಳಲ್ಲಿ ಕಟ್ಟೆಯೊಂದರ ಮೇಲೆ ಕಾಲು ಚಾಚಿ ಕುಳಿತ ಅವನ ತೊಡೆಯಮೇಲೆ ತಲೆಯಿಟ್ಟು ಮಲಗಿ,

'ಏಯ್...' ಅಂದಳಾಕೆ.

'ಏನು?'

'ಈಗ ದಿಗ್ಗಂತ ನನ್ನ ಗಂಡ ಇಲ್ಲಿಗೆ ಬಂದು ಬಿಟ್ಟರೆ?...'

'ಬರಲಿ...'

'ಆತ ನನ್ನನ್ನು ಹೊಡೆದರೆ?'

'ನನ್ನದು ಮಾಂಸದಂಗಡಿ.... ಗೊತ್ತಲ್ಲ?'

'ನೀನು ಪ್ರತಿಭಟಿಸುತ್ತೀಯಾ? ಕಾಡುತ್ತೀಯಾ? ನನ್ನನ್ನು ರಕ್ಷಿಸುತ್ತೀಯಾ?' ಪಟಪಟನೆ ಕೇಳಿದಳು ವೆನ್ನೆಲ.

'ನನ್ನ ಗೋಣು ತರಿದು ನೆಲಕ್ಕೆ ಬೀಳುವ ತನಕ...' ಆತ ಉತ್ತರಿಸಿದ. ಅವಳ ಕೆನ್ನೆಗುಂಟ ಇಳಿದು ಬಂದ ಹನಿಯೊಂದು ಅವನ ತೊಡೆಯಲ್ಲಿ ಇಂಗಿ ಹೋಯಿತು.

'ನಾವು... ಹೀಗ್ಹೀಗೆ ಅಂತ ನಿನ್ನ ಹೆಂಡತಿಗೆ ಗೊತ್ತಾದರೆ?'

'ಅಳುತ್ತಾಳೆ, ಶಪಿಸುತ್ತಾಳೆ. ಪರಚುತ್ತಾಳೆ!' ಕಿರುನಗುತ್ತ ಹೇಳಿದ.

'ನಿಜ?'

'ನಿನ್ನ ನೆನಪಿಸಿಕೊಳ್ತೇನೆ!' ಅವಳು ಫಕ್ಕನೆ ಅವನಿಗೊಂದು ಮುತ್ತಿಕ್ಕಿದಳು. ರಾತ್ರಿ ಸಾಕಷ್ಟು ಕಪ್ಪಗಾಗಿತ್ತು.